**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್ 285/2013**

ಪಿ  ಡಬ್ಲ್ಯೂ-1

**ದಿನಾಂಕ 18-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಶ್ರೀ  ಎಮ್ ಸಿ ಎಸ್  ಪ್ರತಿವಾದಿ 6 ರ  ಪರ ವಕೀಲರುಃ**

ನಾನು ದಾವೆಯನ್ನು ಸಲ್ಲಿಸುವ ಸಂದರ್ಭದಲ್ಲಿ ಕೆ ಆರ್ ನಗರದಲ್ಲಿ ನಮ್ಮ ತಾಯಿಯ ಜೊತೆ ವಾಸವಾಗಿದ್ದೇನು. ನಮ್ಮ ತಂದೆ ನಮ್ಮ ಜೊತೆಯಲ್ಲಿಯೇ ವಾಸವಾಗಿದ್ದರು. ನಮ್ಮ ತಾತ ಕೆಂಚೇಗೌಡ ಎಂದರೆ ಸರಿ.  ಅವರು 2006 ರಲ್ಲಿ ಮೃತ ಪಟ್ಟಿರುತ್ತಾರೆ. ಅವರು ಸಾಯುವ ಮೊದಲು ಆರೋಗ್ಯವಾಗಿದ್ದರು ಮತ್ತು ಆರಾಮವಾಗಿ ಓಡಾಡಿಕೊಂಡಿದ್ದರು. ನಮ್ಮ ತಾತ  ಕೆಂಚೆಗೌಡರಿಗೆ ಸಾಯುವ ಹಿಂದೆ ಕಿವಿ ಚೆನ್ನಾಗಿ ಕೇಳಿಸುತ್ತಿತ್ತು ಮತ್ತು ಓದಲು ಮತ್ತು ಬರೆಯಲು ಬರುತ್ತಿತು್ತ. ಅವರು ವಿದ್ಯಾವಂತರಾಗಿದ್ದರು ಎಂದರೆ ಸರಿ.

2. ನಮ್ಮ ತಾತ ಕೆಸ್ತೂರು ಕೊಪ್ಪಲು ಗ್ರಾಮದಲ್ಲಿ ನಮ್ಮ ಚಿಕ್ಕಪ್ಪನ ಮಗ 6 ನೇ ಪ್ರತಿವಾದಿಯ ಜೊತೆ ವಾಸವಾಗಿದ್ದರು ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತುಗಳಲ್ಲಿ ನಮ್ಮ ತಂದೆ ಮತ್ತು ನಮ್ಮ ಚಿಕ್ಕಪ್ಪ ಪ್ರತ್ಯೇಕವಾಗಿ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಒಟ್ಟಿಗೆ ಉಳುಮೆ ಮಾಡುತ್ತಿದ್ದರು ಎಂದು ತಿಳಿಸಿರುತ್ತಾರೆ. ನಮ್ಮ ತಾತ, ತಂದೆ ಹಾಗೂ ಚಿಕ್ಕಪ್ಪ 1998-99 ರಲ್ಲಿ ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ.

3. ನನಗೆ ಈ ಪ್ರಕರಣದ ಕುರಿತು ಎಲ್ಲಾ ಮಾಹಿತಿ ಇದೆ. 5 ನೇ ಪ್ರತಿವಾದಿ ಕೃಷ್ಣನಾಯಕನಿಗೆ ನಮ್ಮ ಚಿಕ್ಕಪ್ಪ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ದಿಃ 30-05-2005 ರಲ್ಲಿ ನಮ್ಮ ಚಿಕ್ಕಪ್ಪ 5 ನೇ ಪ್ರತಿವಾದಿಗೆ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ.  5 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇರುವುದಿಲ್ಲ.

4. 2005 ನೇ ಇಸವಿಯಿಂದ 5 ನೇ ಪ್ರತಿವಾದಿ ಖಾತೆ ಮಾಡಿಸಿಕೊಂಡು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಾತ ಕೆಂಚೆಗೌಡ ಅವರಿಗೆ ವಿಭಾಗದ ಮುಖಾಂತರ ಬಂದ ಸ್ವತ್ತಿನಲ್ಲಿ ದಾವಾ ಐಟಂ ನಂ 4 ರಲ್ಲಿ 4 ಎ 28 ಗುಂ ಪೈಕಿ 1 ಎಕರೆ, ಅದೇ ರೀತಿ ಐಟಂ 7 ರಲ್ಲಿ 13 ಗುಂಟೆ ಒಟ್ಟು 1 ಎ 13 ಗುಂಟೆ ಜಮೀನನ್ನು ಪ್ರತಿವಾದಿ 6 ರವರಿಗೆ ದಿಃ 03-03-2003 ರಲ್ಲಿ ವಿಲ್ ಮಾಡಿದ್ದಾರೆ ಎಂದರೆ ಸಾಕ್ಷಿ ಫೋರ್ಜರಿ ಮಾಡಿದ್ದಾರೆ ಎಂದು ತಿಳಿಸಿರುತ್ತಾರೆ. ಸದರಿ ವಿಲ್ ನೋಂದಾಯಿತ ವಿಲ್ ಎಂದರೆ ಸರಿಯಲ್ಲ.

5. ಸದರಿ ವಿಲ್ ಕಾನೂನು ಬದ್ಧಚಿವಾಗಿ ಸರ್ಕಾರಿ ಕಚೇರಿಯಿಲ್ಲಿ ನೋಂದಾವಣಿಯಾಗಿದ ಎಂದರೆ ಸರಿಯಲ್ಲ. ಆದ್ದರಿಂದ ನನಗೆ ಸದರಿ ವಿಲ್ ನ ಮುಖಾಂತರ ಪ್ರತಿವಾದಿ 6 ರವರಿಗೆ ಬಂದ ಆಸ್ತಿಯಲ್ಲಿ ಯಾವುದೇ ರೀತಿಯ ಹಕ್ಕು ಮತ್ತು ಪಾಲು ಇರುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ 6 ರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ